

ಚೀನಾ ಬೌದ್ಧ ದೇಗುಲದ ಬುದ್ಧ ಪ್ರತಿಮೆ





# ಲುಂಬಿನಿಯಲ್ಲಿ ಒಂದು ದಿನ..

ಮದುವೆಯಾಗಿ ಏಳು ವರ್ಷವಾದ ಮೇಲೆ ಹುಟ್ಟಿದ ಮಗನಿಗೆ ಬಸುರಿಯ ಬಯಕೆಯಂತೆ ಸಿದ್ಧಾರ್ಥ ಎಂದು ನಾಮಕರಣ ಮಾಡಿದ್ದಾಗಿತ್ತು. ಮಗನ ಮೊದಲ ಹುಟ್ಟುಹಬ್ಬವನ್ನು ಗೌತಮ ಬುದ್ಧ ಜನಿಸಿದ ಲುಂಬಿನಿಯಲ್ಲೇ ಆಚರಿಸಬೇಕೆಂದು ಹಠ ಹಿಡಿದಾಗ, 'ಇದು ಬಾಣಂತಿಯ ಬಯಕೆಯೇ' ಎಂದು ಗಂಡ ನಕ್ಕು ಒಪ್ಪಿದ್ದೂ ಆಗಿತ್ತು.

2005ರ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಭೂಕಂಪವೆಂಬ ರಾಕ್ಷಸ ನೇಪಾಳವನ್ನು ಅಲುಗಾಡಿಸಿದಾಗ, ದೂರದ ಕತಾರಿನಲ್ಲಿದ್ದ ನಮ್ಮ ಮನಸ್ಸು ವಿಲವಿಲನೆ ಒದ್ದಾಡಿಬಿಟ್ಟಿತು. ಮನಸ್ಸಿನ ಮೂಲೆಯಲ್ಲಿ ಲುಂಬಿನಿ ವನ ಹೇಗೆ ಇಲ್ಲಿಗೆ ಬರುತ್ತೀರಿ ಎಂದು ಸವಾಲೆಸೆದಂತಾಯಿತು.

ಭೂಕಂಪದಲ್ಲಿ ಬೇರೆ ಸ್ಥಳಗಳು ಸಾಕಷ್ಟು ಹಾನಿಗೊಳಗಾಗಿದ್ದರೂ, ಲುಂಬಿನಿ ಸುರಕ್ಷಿತವಾಗಿರುವ ಸುದ್ದಿ ತಿಳಿದಾಗ ಕಣ್ಣು ಹನಿಗೂಡಿದ್ದು ನಿಜ. ಸೆಪ್ಟೆಂಬರ್ ಕೊನೆಯಲ್ಲಿ ನೇಪಾಳಕ್ಕೆ ಹೊರಡುವುದೆಂದು ನಿರ್ಧರಿಸಿ, ಐದಾರು ಮಂದಿಯನ್ನು ವಿಚಾರಿಸಿದರೆ, ಎಲ್ಲರದೂ ಒಂದೇ ಉತ್ತರ– 'ಮತ್ತೆ ಭೂಕಂಪವಾಗುವ ಎಲ್ಲಾ ಸಾಧ್ಯತೆಗಳಿವೆ. ಬೇರೆಲ್ಲಾದರೂ ಹೋಗಬಾರದೆ?'

ಟಿಕೆಟ್ ಬುಕ್ ಮಾಡುವ ಮುನ್ನ, 'ಮತ್ತೆ ಭೂಕಂಪವಾದರೆ...?' ಎಂದು ಅನುಮಾನವೂ ವ್ಯಕ್ತವಾಗಿತ್ತು. ಕೊನೆಗೆ ಗೆದ್ದಿದ್ದು ನಮ್ಮ ಗಟ್ಟಿ ನಿರ್ಧಾರವೇ. ನೇಪಾಳವನ್ನೇನೋ ತಲುಪಿದೆವು, ಆದರೆ ಹೋದ ಎರಡು ದಿನಗಳಲ್ಲಿಯೇ ಭಾರತದಿಂದ ತೈಲದ ಲಾರಿಗಳನ್ನು ಗಡಿಯಲ್ಲಿ ತಡೆದದ್ದರಿಂದ ಇಡೀ ನೇಪಾಳದಲ್ಲಿ ಪೆಟ್ರೋಲ್ ಮತ್ತು ಡೀಸೆಲ್‌ಗೆ ಹಾಹಾಕಾರ ಎದ್ದುಬಿಟ್ಟಿತು.

ಭಾರತದವರ, ಅದರಲ್ಲೂ ಉತ್ತರ ಭಾರತದವರ, ಮೇಲೆ ನೇಪಾಳಿಗಳಿಗೆ ಆ ಸಮಯದಲ್ಲಿ ಕೆಂಡದಂಥ ಕೋಪ. ನಮ್ಮ ಡ್ರೈವರ್ ರೂಪ್ ಲಾಲ್ ಹೋಗುವಾಗಲೇ, 'ಯಾರಾದರೂ ಕೇಳಿದರೆ ಮದರಾಸಿಗಳು ಎಂದು ಹೇಳಿ' ಎಂದು ಎಚ್ಚರಿಸಿದ್ದ. ಈ ಎಲ್ಲ ಸಮಸ್ಯೆಗಳನ್ನು ಎದುರಿಸಿ ಅಂತೂ ಇಂತೂ ಮಗನ